## ಪದಬಂಧ



ಎಡದಿಂದ ಬಲಕ್ಕೆ

1. ಉದ್ಯಾನದ ಈ ಸ್ಥಿತಿಯನ್ನು ಕಂಡೂ ಏಕೆ ಇಂಥ ನಿರ್ಲಕ್ಷ್ಯ? 3
3. ಸರ್ವವಿಧ ಅಂಗರಾಗಗಳ ಭಂಡಾರವೂ ಇದೇ 3
4. ಆ ನಗೆಗಾರನ ಪ್ರಸಿದ್ಧಿ ಆಕಾಶ ಮುಟ್ಟಿದೆ 3
6. ಮುರುಗನಿಗೆ ತೊಡಿಸಿರುವ ವಸ್ತ್ರದಲ್ಲಿ ಕಿಂಚಿತ್ತೂ ಸುಕ್ಕಿಲ್ಲ 4
7. ಅಂಗಳಕ್ಕೆ ಬಂದು ನಿಂತವರಿಗೆಲ್ಲ ಗೋಚರವಾದೀತು ಮಂಗಳ ಗ್ರಹ 4
9. ಅವರಿವರಿಂದ ಪಡೆಯಲು ಸಾಧ್ಯವಾದೀತೇ ಇಂಥ ತಾವರೆ? 4
11. ಕಂಡವರಿಂದೆಲ್ಲ ಹಣ ಕೀಳುವುದಕ್ಕೆ ಈಗ ಭದ್ರ ನಿಯಂತ್ರಣ 4
13. ತುಂಗಾ ತೀರದ ಜನರದೇ ಒಂದು ವಿಶೇಷ ದರ್ಜೆ ಹೌದೇ? 4
15. ಆಮಿಷಕ್ಕೆ ಬಲಿಯಾದ ಆತ ಹೆಸರೇ ಇಲ್ಲದವನಾದ 4
17. ದುರ್ಗಂಧ ಹರಡುವವರನ್ನು ಬೈದು ಹೆದರಿಸು 3
18. ರಾಜಕಾರಣಿಗಳನ್ನೆಲ್ಲ ಅಣಕವಾಡುವವನಿಂದ ಒಳ್ಳೇ ಮನರಂಜನೆ 3
19. ಅವರ ಹೊಲದ ಸಸ್ಯಗಳೆಲ್ಲ ದನಗಳಿಗೆ ಒಳ್ಳೇ ಮೇವು 4

ಮೇಲಿನಿಂದ ಕೆಳಕ್ಕೆ

1. ಗರ್ವಪಡುತ್ತಿದ್ದವರನ್ನು ನಡುಗಿಸಿತು ಸರೀಸೃಪ 3
2. ನಾರಿಯರಿಗೆಲ್ಲ ಪ್ರಿಯವಾಗುವುದು ಇಂಥದೇ ಶಹರ 3
3. ಅಧ್ಯಯನಶೀಲರನ್ನು ಕಂಡರೇ ಗೌರವ 3
5. ನಾಶವಾಗದಿರುವ ವಸ್ತು ಯಾವುದು? ಎಲ್ಲವೂ ಅಶಾಶ್ವತ 3
7. ಆತುರವನ್ನು ತೋರಿದವರ ಮುಂದೆ ಬಂದು ನಿಂತವ ಯಮ 3
8. ಕಣ್ಣಿಗಾಗಿರುವ ತೊಂದರೆಯನ್ನು ಸರಿಪಡಿಸಲೊಂದು ಸಾಧನ 3
9. ಅವನ ಆತಂಕಗಳಿಗೆ ಕೊನೆಯೇ ಇಲ್ಲ ಬಿಡಿ 3
10. ಎಲ್ಲರನ್ನೂ ಹೊರಕ್ಕೆ ದೂಡುತ್ತಿರುವವನದು ಭಾರೀ ಗಾತ್ರ 3
12. ಒಳ್ಳೆಯ ಕೆಲಸಗಳನ್ನೆಲ್ಲ ಘೋಷಿಸಲು ತಕ್ಕ ಪ್ರಸಿದ್ಧ ವಾದ್ಯ 3
14. ಆ ಊರಿನಲ್ಲಿದ್ದ ವಾನರರನ್ನೆಲ್ಲ ದೂರದ ಕಾಡಿಗೆ ಸಾಗಿಸಿದ್ದಾಯಿತು 3
15. ಆಹಾರ ಏನು ಬೇಕೆಂಬುದನ್ನು ತಿಳಿಸು, ಹೇಳು 3
16. ಕಂಡರಿಯದಷ್ಟು ಸುಂದರ ಈ ಭರಣಿ 3

---

### 28–07–2022 ಉತ್ತರಗಳು

ಎಡದಿಂದ ಬಲಕ್ಕೆ

1. ಪ್ರಹಾರ 3. ಆಲೇಖ 4. ಸಿಡುಕ 6. ರಕ್ಷಕ 7. ವಿನಾಯಕ 9. ಭವಬಂಧ 11. ಸುಪ್ರಭಾತ 13. ರಮಾಪತಿ15. ಮುನಿಸು 17. ಕರಿದು 18. ಮರುಕ 19. ಕದನ

ಮೇಲಿನಿಂದ ಕೆಳಕ್ಕೆ

1. ಪ್ರಖರ 2. ರಸಿಕ 3. ಆಲಯ 5. ಕಕವ7. ವಿಶ್ರಮಿಸು 8. ಕಲಾವಂತ 9. ಭಯಂಕರ 10. ಧನಪತಿ 12. ಭಾಜಕ 14. ಮಾದಕ 15. ಮುದುಕ 16. ಸುಮನ

ಪ್ರಶ್ನಾಂಕಣ

# ಬೆಂಕಿಯ ಬಳಕೆಯ ಕಾಲ ಮೂಲ?

ಮಾನವೇತಿಹಾಸದಲ್ಲಿ ಬೆಂಕಿಯ ಬಳಕೆ ಆರಂಭವಾದದ್ದು ಅತ್ಯಂತ ಮಹತ್ವದ ಒಂದು ಮಜಲು. ವಾಸ್ತವವಾಗಿ ಪ್ರಾಚೀನ ಮಾನವರು (ಚಿತ್ರ2) ಆಧುನಿಕ ಮಾನವರಾಗಲು ದಾರಿ ತೋರಿದ್ದೇ ಬೆಂಕಿ. ಮಾನವರ ಇತಿಹಾಸದಲ್ಲಿ ಬೆಂಕಿಯ ಬಳಕೆ ಆರಂಭವಾದ ಕಾಲ ಮತ್ತು ಅದನ್ನು ಆರಂಭಿಸಿದ ಮಾನವ ಪ್ರಭೇದ ಯಾವುದು? ಈ ಕುರಿತು ಹೇರಳ ಶೋಧಗಳು ನಡೆದಿವೆ; ಸ್ಥೂಲ ಉತ್ತರವೂ ಲಭ್ಯವಾಗಿದೆ.

- ಬೆಂಕಿಯ ಬಳಕೆ ವ್ಯಾಪಕವಾಗಿ ನಡೆದಿದ್ದು ಈಗ್ಗೆ ಸುಮಾರು ನಾಲ್ಕು ಲಕ್ಷ ವರ್ಷ ಹಿಂದೆ. ಯೂರೋಪ್, ಆಫ್ರಿಕಾ, ಏಷ್ಯಾ ಮತ್ತು ಮಧ್ಯ ಪ್ರಾಚ್ಯದ ಪ್ರಾಚೀನ ಮಾನವರ ಹಲವಾರು ನೆಲೆಗಳಲ್ಲಿ ಬೆಂಕಿಯ ಬಳಕೆಯ ಕುರುಹುಗಳು ಪ್ರಾಪ್ತವಾಗಿವೆ. ಗುಹಾ ಚಿತ್ರಗಳ ನೆಲೆಗಳಲ್ಲೂ ಬೆಳಕಿಗಾಗಿ ಬೆಂಕಿಯನ್ನು ಉರಿಸಿದ ಅವಶೇಷಗಳು ದೊರಕಿವೆ (ಚಿತ್ರ 3,4)
- ಅದಕ್ಕೂ ಹಿಂದೆ ಈಗ್ಗೆ ಎಂಟು ಲಕ್ಷ ವರ್ಷ ಹಿಂದಿನ ಸುಮಾರಿಗೇ ಬೆಂಕಿಯ ಬಳಕೆಯ ಸ್ಪಷ್ಟ ಕುರುಹುಗಳು ಒಂದೆರಡು ತಾಣಗಳಲ್ಲಿ ಕಾಣಸಿಕ್ಕಿವೆ. ಈಗಿನ ಇಸ್ರೇಲ್ ದೇಶದ ಒಂದು ಸ್ಥಳದಲ್ಲಿ ಮಣ್ಣಿನ ಒಲೆಗಳು, ಬೂದಿ, ಅರೆಬರೆ ಸುಟ್ಟ ಸೌದೆಯ ಚೂರುಗಳು ದೊರಕಿವೆ; ಬೆಂಕಿಯಲ್ಲಿ ಕಾಯಿಸಿ ಕೊಚ್ಚಿ ರೂಪಿಸಿದ ಫ್ಲಿಂಟ್ ಶಿಲಾಯುಧಗಳೂ ಸಿಕ್ಕಿವೆ.
- ದಕ್ಷಿಣ ಆಫ್ರಿಕಾದ 'ವಂಡರ್ ವರ್ಕ್ ಗುಹೆ'ಯಲ್ಲಿ ಈಗ್ಗೆ ಒಂದು ದಶಲಕ್ಷ ವರ್ಷ ಹಿಂದಿನ ಕಾಲದ ಬೆಂಕಿಯ ಬಳಕೆಯ ಅವಶೇಷಗಳು ಲಭ್ಯವಾಗಿವೆ. ಒಲೆಗಳು, ಬೂದಿ, ಉರಿದ ಸೌದೆ ಚೂರುಗಳು... ಜೊತೆಗೆ ಸುಟ್ಟ ಪ್ರಾಣಿ ಮೂಳೆಗಳೂ ಅಲ್ಲಿ ದೊರಕಿವೆ. ಬೆಂಕಿಯ ಬಳಕೆ ಒಂದು ದಶಲಕ್ಷ ವರ್ಷಗಳಿಗೂ ಹಿಂದಿನದೆಂಬುದು ಸ್ಪಷ್ಟವಾಗಿದೆ.




ಪುರಾತತ್ವ ವಿದ್ವಾಂಸರ ಪ್ರಕಾರ ಬೆಂಕಿಯ ಬಳಕೆ ಅದಕ್ಕೂ ಬಹಳ ಹಿಂದೆಯೇ, ಈಗ್ಗೆ ಎರಡು ದಶಲಕ್ಷ ವರ್ಷ ಹಿಂದಿನ ಸುಮಾರಿಗೇ, ಆಗ ಧರೆಯಲ್ಲಿದ್ದ 'ಹೋಮೋ ಇರೆಕ್ಟಸ್' ಪ್ರಭೇದದ ಮನುಷ್ಯರಿಂದ ಆರಂಭಗೊಂಡಿದೆ. ಏಕೆಂದರೆ, ಈಗ್ಗೆ ಎರಡು ದಶಲಕ್ಷ ವರ್ಷಗಳಿಗೂ ಈಚಿನ ಹೋಮೋ ಇರೆಕ್ಟಸ್ ಮನುಷ್ಯರ ತಲೆ ಬುರುಡೆಗಳ ಗಾತ್ರ (ಎಂದರೆ ಮೆದುಳಿನ ಗಾತ್ರ) ಹೆಚ್ಚಾಗಿದೆ; ಬಾಯಿ ಮತ್ತು ಹಲ್ಲುಗಳು ಚಿಕ್ಕದಾಗಿವೆ; ಜೀರ್ಣಾಂಗಗಳ ಗಾತ್ರ ಕುಗ್ಗಿದೆ. ಇಂಥ ರೂಪಾಂತರಗಳೆಲ್ಲ ಸಂಭವಿಸಲು ಸುಲಭವಾಗಿ ಜೀರ್ಣವಾಗುವ ಆಹಾರಗಳ ಧಾರಾಳ ಸೇವನೆ ಅನಿವಾರ್ಯ. ಹಾಗಾಗಲು ಆಹಾರವನ್ನು ಬೇಯಿಸಿದರಷ್ಟೇ ಸಾಧ್ಯ. ಆದ್ದರಿಂದ ಬೆಂಕಿಯ ಬಳಕೆಯ ಮೂಲ ಕಾಲ ಈಗ್ಗೆ ಎರಡು ದಶಲಕ್ಷ ವರ್ಷ ಹಿಂದಿನದು; ಅದನ್ನಾರಂಭಿಸಿದ ಮೂಲ ಮಾನವ ಪ್ರಭೇದ 'ಹೋಮೋ ಇರೆಕ್ಟಸ್' ಎಂಬುದು ಸ್ಪಷ್ಟ.

■ ಎನ್. ವಾಸುದೇವ್